(2) ಗಡಿಕೇಶ್ವರ ಹಾಗೂ ಇತರೆ 4 ಗ್ರಾಮಗಳ ರೂ.5.00 ಕೋಟಿ ಅಂದಾಜಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಈಗಾಗಲೇ ಟೆಂಡರ್ ಕರೆದಿದ್ದು, ಆರ್ಥಿಕ ಬಿಡ್ ಪರಿಶೀಲನೆ ನಡೆದಿದೆ.

(3) ಪಸ್ತಾಪೂರ ಹಾಗೂ ಇತರೆ 8 ಗ್ರಾಮಗಳ ರೂ.5.40 ಕೋಟಿ ಅಂದಾಜಿನ ಬಹುಗ್ರಾಮ ಕುಡಿಯುವ ನೀರು ಯೋಜನೆಗೂ ಸಹ ಈಗಾಗಲೇ ಟೆಂಡರ್ ಕರೆದಿದ್ದು, ತಾಂತ್ರಿಕ ಬಿಡ್ ಪರಿಶೀಲನೆ ನಡೆದಿದೆ.

ಇದಲ್ಲದೆ, ಚಿಂಚೋಳಿ ತಾಲ್ಲೂಕಿನ 245 ಜನವಸತಿಗಳಿಗೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರು ಪೂರೈಸುವ ಸಲುವಾಗಿ ಸಮಾಲೋಚಕರಿಂದ ಪ್ರಾಥಮಿಕ ಯೋಜನಾ ವರದಿಯ (PSR) ನ್ನು ತಯಾರಿಸಲಾಗಿದೆ. ಈ PSR ಗೆ ರಾಜ್ಯ ತಾಂತ್ರಿಕ ಸಮಿತಿ (STA) ಯಿಂದ ಅನುಮೋದನೆ ದೊರೆತ ನಂತರ ವಿವರವಾದ ಯೋಜನಾ ವರದಿ (DSR) ತಯಾರಿಸಿ, ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ಸಭೆ (SLSSC) ಯಲ್ಲಿ ಅನುಮೋದನೆ ಪಡೆಯಬೇಕಾಗಿದೆ.

ಸರ್ಕಾರಿ ಕಾಲೇಜುಗಳಲ್ಲಿ ಬಿಸಿಯೂಟ

1355(405); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರಿನಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು;

ಆ) ಈ ವಿದ್ಯಾರ್ಥಿಗಳಿಗೆ ರೂ.5ರ ರಿಯಾಯಿತಿ ದರದಲ್ಲಿ ಬಿಸಿಯೂಟ ಒದಗಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ) ಹಾಗಿದ್ದಲ್ಲಿ, ಈ ಸೌಲಭ್ಯವನ್ನು ಎಂದಿನಿಂದ ಕಲ್ಪಿಸಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು)

ಅ) ವಿದ್ಯಾರ್ಥಿಗಳ ಒಟ್ಟು ಸಂಖ್ಯೆ:– 10588

ವಿದ್ಯಾರ್ಥಿನಿಯರ ಒಟ್ಟು ಸಂಖ್ಯೆ:– 14076

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಖಾಲಿ ಇರುವ ಬೋಧಕ / ಬೋಧಕೇತರ ಹುದ್ದೆಗಳು

1356(406); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಈ ಕಾಲೇಜುಗಳಲ್ಲಿ ಖಾಲಿ ಇರತಕ್ಕ ಬೋಧಕ / ಬೋಧಕೇತರ ಹುದ್ದೆಗಳೆಷ್ಟು;

ಇ) ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು)

ಅ) **ಒಟ್ಟು – 411**

ಆ) **ಖಾಲಿ ಇರುವ ಬೋಧಕರ ಹುದ್ದೆ – 2015**

ಖಾಲಿ ಇರುವ ಬೋಧಕೇತರ ಹುದ್ದೆ – 2957

ಇ) ಖಾಲಿ ಇರುವ ಬೋಧಕರ ಹುದ್ದೆಗಳಲ್ಲಿ ಆರ್ಥಿಕ ಇಲಾಖೆಯು ಅನುಮತಿ ನೀಡಿರುವ 1298 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸಿ.ಇ.ಟಿ. ಮುಖಾಂತರ ಭರ್ತಿ ಮಾಡಲು ಕ್ರಮ ವಹಿಸಲಾಗಿದೆ. ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶೀಲನೆಯಲ್ಲಿದೆ.